OS No. 35/2023

PW-1

**(ಇಂದು ದಿಃ 21-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- 17ನೇ ಪ್ರತಿವಾದಿ ಪರ ಶ್ರೀ. ಬಿ ಎಸ್ ವಕೀಲರಿಂದಃ-**

ನನ್ನ ಮದುವೆ 2002ರಲ್ಲಿ ಆಗಿದೆ. ನನ್ನನ್ನು ಗಡಿಕೇಶ್ವರಕ್ಕೆ ಮದುವೆ ಮಾಡಿಕೊಟ್ಟಿದ್ದಾರೆ. 5ನೇ ಪ್ರತಿವಾದಿ ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. ವ್ಯವಸಾಯ ಬಿಟ್ಟು ಅವರಿಗೆ ಬೇರೆ ಆದಾಯ ಇಲ್ಲ ಎಂದರೆ ಸರಿ. ಸರ್ವೆ ನಂಬರ 8/1(ಬಿ), 8/1(ಡಿ) ಮತ್ತು 8/1(ಇ) ಸರ್ವೆ ನಂಬರ ಜಮೀನುಗಳನ್ನು ಪ್ರತಿವಾದಿಯರು 1996ರಲ್ಲಿ ಭೂ ಪರಿವರ್ತನೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಜಮೀನುಗಳು ಕಪ್ಪು ಮಣ್ಣಿನ ಜಮೀನುಗಳು ಎಂದರೆ ಸರಿ. 1 ರಿಂದ 5 ನೇ ಪ್ರತಿವಾದಿಯರ ನಡುವೆ ದಿಃ 18-10-2010ರಂದು ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಮದುವೆ ನಂತರ ನಾನು ಆಗಾಗ ತವರುಮನೆಗೆ ಬರುತ್ತಿದ್ದೆ. ಆಗಾಗ ಬರುತ್ತಿದ್ದ ಕಾರಣ ಪ್ರತಿವಾದಿಯರು ನಿವೇಶನಗಳನ್ನು ಮಾರಾಟ ಮಾಡಿದ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ವಿಭಾಗ ಪತ್ರದ ಪ್ರಕಾರ 5ನೇ ಪ್ರತಿವಾದಿಗೆ ಪ್ಲಾಟ ನಂಬರ 11, 14, 20, 21, 26, 31, 36, 41, 44, 49, 54, 59 ಬಂದಿದ್ದವು ಎಂದರೆ ಸರಿಯಲ್ಲ. 1 ರಿಂದ 5ನೇ ಪ್ರತಿವಾದಿಯರು ಲೇಔಟ ಮಾಡಲು ಮತ್ತು ಭೂಪರಿವರ್ತನೆ ಮಾಡಿಸಲು ಬಂಡವಾಳ ಹೂಡಿದ್ದಾರೆ ಎಂದರೆ ಸರಿಯಲ್ಲ. ಪ್ಲಾಟ ನಂಬರ 20 ಮತ್ತು 21 ಯಾವ ಸರ್ವೆ ನಂಬರನಲ್ಲಿ ಬರುತ್ತವೆ ನನಗೆ ಗೊತ್ತಿಲ್ಲ. 3 ಸರ್ವೆ ನಂಬರಗಳ ಜಮೀನುಗಳನ್ನು ಭೂಪರಿವರ್ತನೆ ಮಾಡಿಸಿ ಲೇಔಟ ಮಾಡಲು 1 ರಿಂದ 5ನೇ ಪ್ರತಿವಾದಿಯರು ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ.

5ನೇ ಪ್ರತಿವಾದಿಗೆ ಮಕ್ಕಳು ಇಲ್ಲ, ಹೆಂಡತಿ ಇದ್ದಾಳೆ. 5ನೇ ಪ್ರತಿವಾದಿ ಭೂಪರಿವರ್ತನೆ ಮತು ಲೇಔಟ್‌ಗಾಗಿ ಮಾಡಿದ್ದ ಸಾಲ ತೀರಿಸುವ ಸಲುವಾಗಿ ಪ್ಲಾಟ ನಂಬರ 20 ಮತ್ತು 21 ಅನ್ನು 17ನೇ ಪ್ರತಿವಾದಿಗೆ ನೊಂದಾಯಿತ ಕ್ರಯ ಪತ್ರದ ಪ್ರಕಾರ ದಿನಾಂಕಃ 06-06-2018ರಂದು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅಂದಿನಿಂದ ಪ್ಲಾಟ ನಂಬರ 20 ಮತ್ತು 21ರಲ್ಲಿ 17ನೇ ಪ್ರತಿವಾದಿ ಕಬ್ಜಾದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಖರೀದಿ ಪತ್ರ ಆದ

ನಂತರ 17ನೇ ಪ್ರತಿವಾದಿ ಹೆಸರಿಗೆ ಮುಟೇಷನ್ ಆಗಿದ್ದು ಅವರೇ ಮಾಲಿಕರಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಗೊತ್ತಿಲ್ಲ. ಪ್ಲಾಟ ನಂಬರ 20 ಮತ್ತು 21ಕ್ಕೆ 17ನೇ ಪ್ರತಿವಾದಿ ಕರ ಪಾವತಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ಲಾಟಗಳನ್ನು ಸಮತಟ್ಟು ಮಾಡಲು 17ನೇ ಪ್ರತಿವಾದಿ ಹಣ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. ಲೇಔಟ್‌ನಲ್ಲಿನ 60ಪ್ಲಾಟಗಳ ಪೈಕಿ 39 ಪ್ಲಾಟ್‌ಗಳು  ಇನ್ನೂ ಮಾರಾಟ ಆಗದೆ ಉಳಿದುಕೊಂಡಿವೆ ಎಂದರೆ ನನಗೆ ಗೊತ್ತಿಲ್ಲ. ಎಷ್ಟು ಪ್ಲಾಟ್‌ಗಳು ಉಳಿದಿವೆ ನನಗೆ ಗೊತ್ತಿಲ್ಲ. ಒಟ್ಟು 60 ಪ್ಲಾಟ್ ಹಾಕಿದ್ದರು. ಎಷ್ಟು ಪ್ಲಾಟ್ ಮಾರಾಟ ಮಾಡಿದ್ದಾರೆ ಗೊತ್ತಿಲ್ಲ. 5ನೇ ಪ್ರತಿವಾದಿಯಭಾಗಕ್ಕೆ ಬಂದ 12 ಪ್ಲಾಟಗಳ ಪೈಕಿ 2 ಪ್ಲಾಟ್‌ಗಳು ಮಾತ್ರ ಆತ ಮಾರಾಟ ಮಾಡಿದ್ದು 10 ಪ್ಲಾಟ್ ಅವನ ಬಳಿ ಇವೆ ಎಂದರೆ ನನಗೆ ಗೊತ್ತಿಲ್ಲ. 17ನೇ ಪ್ರತಿವಾದಿ ಎಲ್ಲಾ ದಾಖಲಾತಿಗಳನ್ನು ಪರೀಶೀಲನೆ ಮಾಡಿ 5ನೇ ಪ್ರತಿವಾದಿಗೆ ಹಣ ಕೊಟ್ಟು ಪ್ಲಾಟ್ ನಂಬರ 20 ಮತ್ತು 21ಅನ್ನು ಖರೀದಿ ಪಡೆದುಕೊಂಡಿದ್ದರು ಕೂಡಾ ಆತನಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಇನ್ನೂ ಮಾರಾಟ ಆಗದೆ ಇರುವ ಪ್ಲಾಟ್‌ಗಳಲ್ಲಿ ನನ್ನ ಭಾಗ ಪಡೆದುಕೊಳ್ಳುವುದನ್ನು ಬಿಟ್ಟು 17 ನೇ ಪ್ರತಿವಾದಿ ವಿರುದ್ಧ ವಿನಾಹಃ ಕಾರಣ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದ ಸಂಗತಿಗಳು ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 7ನೇ ಪ್ರತಿವಾದಿ ಪರ ಶ್ರೀ ಇ ಎಸ್ ಕೆ ವಕೀಲರಿಂದಃ-</u>**

1 ರಿಂದ 6ನೇ ಪ್ರತಿವಾದಿಯರು ನನ್ನ ಸಹೋದರರು ಮತ್ತು ಸಹೋದರಿ. 7 ರಿಂದ 26ನೇ ಪ್ರತಿವಾದಿಯರು ದಾವಾ ಸ್ವತ್ತುಗಳ ಪೈಕಿ ಕೆಲ ಭಾಗ ಖರೀದಿ ಮಾಡಿರುವ ಕಾರಣ ಅವರನ್ನು ಪಾರ್ಟಿ ಮಾಡಿದ್ದೇನೆ.  ನನ್ನ ಮದುವೆ ಕಾಲಕ್ಕೆ ನನ್ನ ತಂದೆ ಕುಟುಂಬದಲ್ಲಿ ವಿಭಾಗ ಮಾಡಿ ನನಗೆ ಬರಬೇಕಾದ ಭಾಗವನ್ನು ಹಣ ಮತ್ತು ಬಂಗಾರದ ರೂಪದಲ್ಲಿ ಕೊಟ್ಟಿದ್ದರು ಎಂದರೆ ಸರಿಯಲ್ಲ.  ಸರ್ವೆ ನಂಬರ 20/10ರಲ್ಲಿನ 2 ಎಕರೆ ಜಮೀನನ್ನು ದಿನಾಂಕ20-10-2022ರಂದು 4ನೇ ಪ್ರತಿವಾದಿ 7 ನೇ ಪ್ರತಿವಾದಿಗೆ ನನ್ನ ಗಮನಕ್ಕೆ ತಂದು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ವ್ಯವಹಾರದ ಬಗ್ಗೆ ನನಗೆ ಗೊತ್ತಿದ್ದರು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ20-10-2022 ಖರೀದಿ ಪತ್ರ ನನಗೆ ಬಂದನ ಕಾರಕ ಇದೆ ಎಂದರೆ ಸರಿಯಲ್ಲ. ಖರೀದಿ ಆದ ನಂತರ 7ನೇ ಪ್ರತಿವಾದಿ

OS No. 35/2023
PW-1

ಹೆಸರಿಗೆ ಮುಟೇಷನ್ ಆಗಿದ್ದು ಅಂದಿನಿಂದ ಮಾಲಿಕರಾಗಿ ಅವರೇ ಕಬ್ಜಾದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 7ನೇ ಪ್ರತಿವಾದಿ ದಿನಾಂಕಃ25-04-2023ರಂದು ತನ್ನ ಹೆಂಡತಿ ಹೀರಾಮಣಿ ಹೆಸರಿಗೆ ದಾನ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ವ್ಯವಹಾರದ ಬಗ್ಗೆ ನನಗೆ ಗೊತ್ತಿದ್ದರು 7ನೇ ಪ್ರತಿವಾದಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**(15ನೇ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**

OS No. 35/2023

PW-1